ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಜಿಲ್ಲಾಧಿಕಾರಿಗಳ ಕಾರ್ಯಾಲಯ

ಬಾಗಲಕೋಟೆ-587102

ದೂರವಾಣಿ ಸಂಖ್ಯೆ:08354-235091/235092 ಫ್ಯಾಕ್ಸ್ ನಂ:08354-235092/235096

---

ನಂ:ಕಂಶಾ:ಸಿಬ್ಬಂದಿ(1)ಸಿಆರ್-45/09-10 ಬಾಗಲಕೋಟೆ, ದಿ: 1-2-2010

**ಅಧಿಸೂಚನೆ**

ವಿಷಯ:- ಬಾಗಲಕೋಟೆ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿಯಿರುವ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಯ ನೇರನೇಮಕಾತಿ ಯ ಅಂತಿಮ ಆಯ್ಕೆ ಪಟ್ಟಿ ಬಗ್ಗೆ.

ಉಲ್ಲೇಖ:- 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಶಾ: ಸಿಬ್ಬಂದಿ: (2) ವಿವ-44/2009-10 ದಿನಾಂಕ 8-9-2009

2) ಈ ಕಾರ್ಯಾಲಯದ ಅಧಿಸೂಚನೆ ದಿನಾಂಕ: 29-9-2009

3) ಈ ಕಾರ್ಯಾಲಯದ ಸಮಸಂಖ್ಯೆಯ ಅಧಿಸೂಚನೆ ದಿನಾಂಕ 30-11-2009 ರಂದು ಪ್ರಕಟಿಸಲಾದ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ಕಾಯ್ದಿರಿಸದ ಪಟ್ಟಿ ಮತ್ತು ದಿನಾಂಕ 15-12-2009,2-1-2010 ಮತ್ತು 22-1-2010 ರಂದು ಅಭ್ಯರ್ಥಿಗಳ ಮೂಲ ದಾಖಲೆ ಪರಿಶೀಲನೆ ನಡೆಸಿ ಸಿದ್ಧಪಡಿಸಿದ ಪಟ್ಟಿ

4) ಕ.ನಾ.ಸೇ (ಸಾಮಾನ್ಯ ನೇಮಕಾತಿ )ನಿಯಮಗಳು 1977

ಬಾಗಲಕೋಟೆ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿಯಿರುವ 44 ಗ್ರಾಮಲೆಕ್ಕಿಗರ ಹುದ್ದೆಗಳ ನೇರನೇಮಕಾತಿಗೆ ಸಂಬಂದಿಸಿದಂತೆ, ಈ ಕಾರ್ಯಾಲಯದ ಉಲ್ಲೇಖ(1) ರ ಅಧಿಸೂಚನೆಯನ್ವಯ, Online/Off line ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸ್ವೀಕೃತಿಯಾದ ಅರ್ಜಿಗಳ ಪೈಕಿ ಮೆರಿಟ್ ಮತ್ತು ರೋಷ್ಟರ ಆಧಾರದ ಮೇಲೆ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ಕಾಯ್ದಿರಿಸದ ಪಟ್ಟಿ ಪ್ರಕಟಿಸಲಾಗಿತ್ತು. ಈ ಪಟ್ಟಿಯಲ್ಲಿರುವ ಹಾಗೂ ಇವರುಗಳ ನಂತರದ ಮೆರಿಟ ಹೊಂದಿದ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ದಿನಾಂಕ 15-12-2009, 2-1-2010 ಹಾಗೂ 22-1-2010 ರಂದು ಪರಿಶೀಲಿಸಲಾಗಿದೆ.

ಅರ್ಹ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಮೆರಿಟ್ ಮತ್ತು ಮೀಸಲಾತಿ ಆಧಾರದ ಮೇಲೆ 44 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಮತ್ತು ಕಾಯ್ದಿರಿಸಿದ ಪಟ್ಟಿಯನ್ನು ಈ ಮೂಲಕ ಪ್ರಚುರಪಡಿಸಲಾಗಿದೆ.

ಕಾಯ್ದರಿಸಿದ ಪಟ್ಟಿಯಲ್ಲಿರುವ (Waiting List) ಸಾಮನ್ಯ ವರ್ಗದ ಅನಂ 1,ಪ.ಜಾತಿಯ ಅನಂ 2 ಹಾಗೂ 3 , ಪ್ರವರ್ಗ-1ರ ಅನಂ 1,ಪ್ರವರ್ಗ 2A ರ ಅನಂ 1,ಪ್ರವರ್ಗ 3A ದ ಅನಂ 1 ಹಾಗೂ 3 ರ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲಿಸುವಾಗ ಅವುಗಳು ಸರಿಯಿಲ್ಲದಿದ್ದರೆ ಅವರ ಅಭ್ಯರ್ಥಿತನವನ್ನು ಪರಿಗಣಿಸಲಾಗುವುದಿಲ್ಲ ಎಂಬ ಷರತ್ತಿಗೆ ಒಳಪಟ್ಟಿದೆ.

ಅಂಗವಿಕಲ ಮೀಸಲಾತಿಗೆ ಸಂಬಂಧಪಟ್ಟಂತೆ ಸರ್ಕಾರದ ಅಧಿಸೂಚನೆ ಸಂ ಡಿಪಿಎಆರ್ 52 ಎಸ್ ಆರ್ ಆರ್ 99 ದಿನಾಂಕ 29-11-2002 ರಲ್ಲಿ ನಿಗದಿಪಡಿಸಿದಂತೆ ಆಯ್ಕೆ ಮಾಡಲಾಗಿದೆ.

ಈ ಅಂತಿಮ ಆಯ್ಕೆ ಪಟ್ಟಿಯನ್ನು ಮಾನ್ಯ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ ಅರ್ಜಿ ಸಂಖ್ಯೆ 5887-5898/2009 ರಲ್ಲಿನ ಅಂತಿಮ ತೀರ್ಮಾನದ ಷರತ್ತಿಗೊಳಪಟ್ಟು ಪ್ರಕಟಿಸಿದೆ.

(ಡಿ.ಎಸ್.ವಿಶ್ವನಾಥ್)

ಅಧ್ಯಕ್ಷರು,

ಗ್ರಾಮಲೆಕ್ಕಿಗರ ನೇರನೇಮಕಾತಿ ಆಯ್ಕೆ ಪ್ರಾಧಿಕಾರ

ಮತ್ತು ಜಿಲ್ಲಾಧಿಕಾರಿಗಳು ಬಾಗಲಕೋಟೆ

**ಪ್ರತಿಯನ್ನು ಆದರಪೂರ್ವಕವಾಗಿ ಸಲ್ಲಿಸಿದೆ.**

1) ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ,ಬಹುಮಹಡಿ ಕಟ್ಟಡ ಬೆಂಗಳೂರು

2) ಸರ್ಕಾರದ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು ) ಬೆಂಗಳೂರು

3)ಮಾನ್ಯ ಪ್ರಾದೇಶಿಕ ಆಯುಕ್ತರು ಬೆಳಗಾವಿ

4) ಮಹಾಲೇಖಪಾಲರು (ಎ&ಇ) ಕರ್ನಾಟಕ ಬೆಂಗಳೂರು.

**<u>ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳಿಸಿದೆ.</u>**

1) ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ ಆಯ್ಕೆ ಪಟ್ಟಿಯನ್ನು ರಾಜ್ಯ ಪತ್ರದ ಮುಂದಿನ ಸಂಚಿಕೆ ಯಲ್ಲಿ ಪ್ರಕಟಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದೆ.

2) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿಗಳು ಗ್ರಾಮಲೆಕ್ಕಾಧಿಕಾರಿ ನೇರನೇಮಕಾತಿ ಪ್ರಾಧಿಕಾರ ಬಾಗಲ ಕೋಟ

3)ಜಿಲ್ಲಾ ಆದಿಕಾರಿಗಳು ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ ಬಾಗಲಕೋಟ

4) ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳು ಬಾಗಲಕೋಟ ಇವರಿಗೆ ಕಳಿಸುತ್ತಾ ಮೇಲ್ಕಂಡ ವಿಷಯವನ್ನು ದಿನಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸಲು ಕೋರಿದೆ.

4) ಉಪ ವಿಭಾಗಾಧಿಕಾರಿಗಳು ಬಾಗಲಕೋಟ/ಜಮಖಂಡಿ ಇವರಿಗೆ ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.

5) ಜಿಲ್ಲೆಯ ಎಲ್ಲ ತಹಶೀಲದಾರರಿಗೆ-ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.

6) ಜಿಲ್ಲಾಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಚುರ ಪಡಿಸಲು

7 ಕಾರ್ಯಾಲಯದ ಲೆಕ್ಕ ಪತ್ರ ಶಾಖೆಗೆ

8) ಸಿಬ್ಬಂದಿ ರಕ್ಷಾ ಕಡತಕ್ಕೆ